ಮನಸ್ಸು ತೀರ ಚಡಪಡಿಸಿತು. ಅದು ನಮ್ಮಪ್ಪನ ದನಿಯಲ್ಲ, ಅದು ನಮ್ಮಪ್ಪ ಎಂದು ಯಾರನ್ನು ನಾನು ತಿಳಿದಿದ್ದೆನೋ, ಯಾರ ಮಾತಿನ ರೀತಿ ನನಗೆ ಪರಿಚಯವಾಗಿತ್ತೋ ಆ ರೀತಿಯ ದನಿಯಲ್ಲ, ಮಾತಲ್ಲ. ಅದನ್ನು ಬರೆದಾಗ ನಮ್ಮಪ್ಪ ಇನ್ನೂ ನಮ್ಮಪ್ಪ ಆಗಿರಲಿಲ್ಲ ಅಂದುಕೊಳ್ಳುವ ಭಯದ ಅಡಿಯಲ್ಲಿ ಇನ್ನೊಂದು ಭಯ ಅಡಗಿತ್ತು. ನಾನು ಅಥೆಂಟಿಕ್ ಅಲ್ಲ, ನಮ್ಮಪ್ಪನ ಬರವಣಿಗೆಯಲ್ಲಿ ಒಳ್ಳೆಯದೇನೂ ಕಾಣಲಾರೆ ಅನ್ನುವ ಭಯ ಅದು. ನಮ್ಮಪ್ಪ ಇತರ ಲೇಖಕರ ಪ್ರಭಾವಕ್ಕೆ ಬಹಳ ಒಳಗಾಗಿರಬೇಕು, ಅದರಿಂದ ಹತಾಶರಾಗಿರಬಹುದು ಅನ್ನುವ ಭಯವೂ ಹೆಚ್ಚಿತು. ಇಂಥದೇ ಭಯ ನಾನು ಯುವಕನಾಗಿದ್ದಾಗ ನನ್ನನ್ನೂ ಕಾಡಿತ್ತು, ನನ್ನ ಜೀವ ಜೀವಾಳವನ್ನು, ಬರೆಯಬೇಕೆಂಬ ಆಸೆಯನ್ನು, ಬರೆದದ್ದನ್ನು ಎಲ್ಲವನ್ನೂ ಪ್ರಶ್ನಿಸಿ ನಿರಾಕರಿಸುವ ಹಾಗೆ ಮಾಡುತ್ತಿತ್ತು. ಲೇಖಕನಾಗಿ ಮೊದಲ ಹತ್ತು ವರ್ಷಗಳಲ್ಲಿ ಈ ಕಳವಳ ತೀರ ಆಳವಾಗಿತ್ತು, ಇದರ ವಿರುದ್ಧ ಹೋರಾಡುತ್ತ ನಾನೊಂದು ದಿನ ಸೋಲು ಒಪ್ಪಿಕೊಂಡೇನು ಅನ್ನಿಸುತ್ತಿತ್ತು, ಪೇಂಟಿಂಗ್ ಕೈಬಿಟ್ಟ ಹಾಗೆ ಬರವಣಿಗೆಯನ್ನೂ ಬಿಟ್ಟೇನು ಅಂದುಕೊಳ್ಳುತ್ತಿದ್ದೆ.

ನಮ್ಮಪ್ಪನ ಸೂಟ್‌ಕೇಸು ಮುಚ್ಚುವಾಗ ನಾನು ದೂರ ಪ್ರಾಂತದ ಹಳ್ಳಿಗಾಡಿನಲ್ಲಿ ಸಿಕ್ಕುಬಿದ್ದವನು, ನನ್ನಲ್ಲಿ ಅಥೆಂಟಿಕ್ ಗುಣವಿಲ್ಲ ಎಂಬ ಎರಡು ಮುಖ್ಯ ಭಾವ ಇದ್ದವು ಎಂದು ಹೇಳಿದೆ. ಇಂಥ ಭಾವ ನನ್ನಲ್ಲಿ ಬಂದದ್ದು ಅದೇ ಮೊದಲೇನೂ ಅಲ್ಲ. ಎಷ್ಟೋ ವರ್ಷ ಕಾಲ, ಓದುವಾಗ, ಬರೆಯುವಾಗ, ಅಧ್ಯಯನ ಮಾಡುವಾಗ, ಕಂಡುಕೊಳ್ಳುವಾಗ ಈ ಭಾವಗಳು ಆಳ, ಮತ್ತೂ ಆಳವಾಗುತ್ತ, ಈ ಭಾವಗಳು ಥರಾವರಿಯಾಗಿ ಕಾಣಿಸಿಕೊಳ್ಳುತ್ತಿದ್ದವು. ಬಗೆಬಗೆಯ ಅನುದ್ದೇಶಿತ ಫಲಿತಾಂಶಗಳು, ಬಗೆಬಗೆಯಲ್ಲಿ ಈ ಭಾವಗಳು ಪ್ರಚೋದನೆ ಪಡೆದು ಬೇರೆ ಬೇರೆ ಬಣ್ಣ ಪಡೆದು, ಬಗೆ ಬಗೆಯ ರೀತಿಯಲ್ಲಿ ಕೊನೆಗೊಳ್ಳುವುದು ನನ್ನ ಅನುಭವಕ್ಕೆ ಬಂದಿತ್ತು. ಹೀಗಾದಾಗ ಪುಸ್ತಕಗಳೂ ಬದುಕೂ ಯುವಕನಾಗಿದ್ದ ನನ್ನಲ್ಲಿ ಗೊಂದಲ ಹುಟ್ಟಿಸಿ ನೋವು ತಂದು, ಚೈತನ್ಯ ದಿಕ್ಕುತಪ್ಪುತ್ತಿತ್ತು. ಆದರೆ ಬರೆಯುವ ಮೂಲಕವೇ ನಾನು ಅಥೆಂಟಿಕ್ ಆಗುವುದು ಅನ್ನುವ ಸಮಸ್ಯೆಯನ್ನು ಪೂರಾ ತಿಳಿದುಕೊಂಡೆ (ಮೈ ನೇಮ್ ಈಸ್ ರೆಡ್ ಮತ್ತು ದಿ ಬ್ಲಾಕ್ ಬುಕ್), ಅಂಚಿನಲ್ಲಿ ಬದುಕುವುದು ಅಂದರೇನು ಅನ್ನುವುದನ್ನೂ ತಿಳಿದುಕೊಂಡೆ (ಸ್ನೋ ಇನ್ ಇಸ್ತಾಂಬುಲ್). ನಮ್ಮೊಳಗಿರುವ, ಅವು ಇವೆ ಎಂದು ನಮಗೂ ಗೊತ್ತೇ ಇರದ ಸುಪ್ತವಾದ ಗಾಯಗಳನ್ನು ಕಂಡು ಒಪ್ಪಿಕೊಳ್ಳುವುದು, ತಾಳ್ಮೆಯಿಂದ ಪರಿಶೀಲಿಸಿಕೊಳ್ಳುವುದು, ಅರ್ಥಮಾಡಿಕೊಂಡು ಅವನ್ನು ಬೆಳಕಿಗೆ ತರುವುದು, ಈ ನೊವು ಈ ಗಾಯಗಳನ್ನು ಒಪ್ಪುವುದು, ಮತ್ತೆ ಅವನ್ನು ನಮ್ಮ ಪ್ರಜ್ಞೆಯ ಚೈತನ್ಯದ ಬರವಣಿಗೆಯ ಅರಿವಿನ ಭಾಗವಾಗಿ ಮಾಡಿಕೊಳ್ಳುವುದು — ಇದು ನನ್ನ ಮಟ್ಟಿಗೆ ಲೇಖಕನಾಗುವ ಪ್ರಕ್ರಿಯೆಯ ಮುಖ್ಯಾಂಶ.

ಎಲ್ಲರಿಗೂ ಗೊತ್ತಿರುವ, ಆದರೆ ಗೊತ್ತಿದೆ ಎಂದು ಯಾರಿಗೂ ತಿಳಿದಿರದ ಸಂಗತಿಗಳ ಬಗ್ಗೆ ಲೇಖಕ ಮಾತಾನಾಡುತ್ತಾನೆ. ಈ ತಿಳಿವಳಿಕೆಯನ್ನು ಅನ್ವೇಷಣೆ ಮಾಡುವುದು, ಅದು ಬೆಳೆಯುವುದನ್ನು ಗಮನಿಸುವುದು ಇದೇ ಒಂದು ಸಂತೋಷದ ಸಂಗತಿ. ಓದುಗರಾದವರು ತಮಗೆ ಪರಿಚಿತವಾದ ಮತ್ತು ಪವಾಡದಂಥ ಬೆರಗುಗೊಳಿಸುವ ಲೋಕಕ್ಕೆ ಭೇಟಿ ನೀಡುವವರಾಗಿರುತ್ತಾರೆ. ಲೇಖಕನಾದವನು ವರ್ಷಗಟ್ಟಲೆ ಕಾಲ ರೂಮಿನಲ್ಲಿ ಒಂಟಿಯಾಗಿ ಕೂತು ತನ್ನ ಕೌಶಲಕ್ಕೆ ಸಾಣೆ ಹಿಡಿಯುತ್ತಿರುವಾಗ, ತನ್ನದೇ ಜಗತ್ತು ಸೃಷ್ಟಿಸುತ್ತಿರುವಾಗ, ಈ ಗುಟ್ಟಾದ ಗಾಯಗಳನ್ನೇ ಆರಂಭ ಬಿಂದುವಾಗಿಸಿಕೊಂಡರೆ ಅವನಿಗೆ ಗೊತ್ತಿದ್ದೋ ಗೊತ್ತಿಲ್ಲದೆಯೋ ಮನುಷ್ಯತ್ವದಲ್ಲಿ ಅಪಾರ ವಿಶ್ವಾಸ ತೋರ್ಪಡಿಸುತ್ತಿರುತ್ತಾನೆ. ಎಲ್ಲ ಮನುಷ್ಯ ಜೀವಿಗಳೂ ಒಬ್ಬರಿಗೊಬ್ಬರು ಹೋಲುತ್ತಾರೆ,